# ಸ್ವಸಾಮರ್ಥ್ಯದಿಂದ ನೆಲೆ ನಿಂತಿದ್ದೇನೆ

**ಶಿಲ್ಪಾ ರವಿ**
ಸ್ಟಾರ್ ಸುವರ್ಣದ
'ಜೀವ ಹೂವಾಗಿದೆ'ಯ
ಮಧುಮತಿ



◆ **ನೀವು ಏನಾಗಬೇಕಿತ್ತು ಎನ್ನುವ ಕನಸು ಇತ್ತು?**

ಇದು ನನ್ನ ಏಳನೇ ಧಾರಾವಾಹಿ. ಮೊದಲು ನಾನು ತಮಿಳು ಧಾರಾವಾಹಿಗಳಲ್ಲಿ ನಟಿಸಿದ್ದೆ. ಕನ್ನಡದಲ್ಲಿ ಐದನೆಯದು. ಚಂದನವನದ ಆಸೆಯಿಂದ ಕಿರುತೆರೆಯಲ್ಲಿ ಪ್ರವೇಶ ಮಾಡಿದಂತೆ ಆಯಿತು. ಪ್ರೌಢಶಾಲೆಯ ತನಕ ನನಗೆ ಯಾವ ಗುರಿ ಇತ್ತು, ಕನಸುಗಳಿದ್ದವು ಎನ್ನುವುದು ಗೊತ್ತಿಲ್ಲ. ನಂತರ ಪೊಲೀಸ್ ಅಧಿಕಾರಿ ಆಗಬೇಕು ಎಂದೆನಿಸಿದ್ದು ನಿಜ. ಎಸ್‌ಐ ಸ್ಪರ್ಧಾತ್ಮಕ ಪರೀಕ್ಷೆಯ ಪಾಸಾಗಿದ್ದೂ ನಿಜ. ಆದರೆ ಅಲ್ಲಿ ಆಯ್ಕೆ ಆಗದೆ ಇರುವುದೂ ಅಷ್ಟೇ ನಿಜ. ಹೀಗಿರುವಾಗಲೇ ನಾನು ಬಣ್ಣದ ಲೋಕ ಪ್ರವೇಶ ಮಾಡಿದೆ. ನಾನು ಇಲ್ಲಿ ಸಂತೋಷವಾಗಿದ್ದೇನೆ. ಎಷ್ಟೋ ಜನರಿಗೆ ಇಂತಹ ಕನಸು ಇರುತ್ತದೆ. ಬಹುತೇಕರು ಅದು ಸಾಧ್ಯವಾಗದೆ ಕೊರಗುತ್ತಾರೆ. ನನಗೆ ಯಾವ ಗಾಡ್ ಫಾದರ್ ಗಾಡ್ ಮದರ್ ಬೆಂಬಲ ಇಲ್ಲದೆ, ಸ್ವಪ್ರಯತ್ನದಿಂದ ಅವಕಾಶ ಪಡೆಯುತ್ತಿದ್ದೇನೆ. ಇದನ್ನೇ ವೃತ್ತಿಯಾಗಿ ಆಯ್ಕೆ ಮಾಡಿಕೊಂಡಿದ್ದೇನೆ.

◆ **ಆರಂಭದ ದಿನಗಳು ಹೇಗಿದ್ದವು?**

ಆಡಿಷನ್ ಕೊಡಬೇಕು ಎನ್ನುವುದೂ ಗೊತ್ತಿರಲಿಲ್ಲ. ಒಂದು ಹಂತದ ಶಿಕ್ಷಣವನ್ನು ಮುಗಿಸಿ ನಾನು ಬಂದಿದ್ದೇನೆ. ಯಾವುದೇ ಆಡಿಷನ್ ಹೋಗುವ ಮುನ್ನ ಅಭ್ಯಾಸ ಮಾಡಿ ಹೋಗುತ್ತೇನೆ. ಆರಂಭದಲ್ಲಿ ಆಯ್ಕೆ ಆಗಿರಲಿಲ್ಲ. ಪಾತ್ರಕ್ಕೆ ಸೂಟ್ ಆಗುತ್ತಿಲ್ಲ ಎಂದು ತಿರಸ್ಕರಿಸಿದ್ದಿದೆ. ಆ ನಂತರ ಅಂತಹ ಸೀನ್ ಇಲ್ಲ. ನೂರಾರು ಜನರ ನಡುವೆ ನಾನು ಆಯ್ಕೆಯಾಗುತ್ತಿದ್ದೇನೆ. ಅದು ನನ್ನ ಅದೃಷ್ಟ ಎಂದೇ ಭಾವಿಸುತ್ತೇನೆ. ಮೊದಲು ತಮಿಳು ಸೀರಿಯಲ್ಲಿನಲ್ಲಿ ವೃತ್ತಿ ಆರಂಭವಾಯಿತು. ಅಲ್ಲಿ ಎರಡು ಧಾರಾವಾಹಿ ಮಾಡಿದ ನಂತರ ಕನ್ನಡಕ್ಕೆ ಮರಳಿದೆ. ನಿರಂತರ ಪ್ರಯತ್ನದಿಂದಲೇ ಇಲ್ಲಿಗೆ ಬಂದಿದೆ. ಈಗಲೂ ಕೆಲವರು 'ನಾಗಿಣಿ'ಯ ಮಯೂರಿ ಎಂದೇ ಕರೆಯುತ್ತಾರೆ. ಅಲ್ಲಿ ನಾನು ವಿಲನ್ ಪಾತ್ರ ಮಾಡಿದ್ದೆ. ಏನೋ ಒಂದು ರೀತಿ ಖುಷಿ ಇದೆ.

ಎಷ್ಟೇ ಸೀನಿಯರ್ ಆದರೂ ಟೆಸ್ಟ್ ಮಾಡದೆ ಹೊಸ ಪಾತ್ರವನ್ನು ಕೊಡುವುದಿಲ್ಲ. ದೂರದ ಬೆಟ್ಟ ನುಣ್ಣಗೆ ಅನ್ನುವ ಹಾಗೆ ನಟರ ಜೀವನ ಚೆಂದ ಎಂದು ಅನ್ನಿಸುತ್ತದೆ. ಇಲ್ಲಿನ ಕಷ್ಟ ಸುಖ ಅವರಿಗಷ್ಟೇ ಗೊತ್ತು. ಇದು ತುಂಬಾ ಪ್ರಯಾಸದ ಪಯಣ. ಬೆಳ್ಳಿತೆರೆಗೆ ಹೋಗಬೇಕಾದ ನಾನು ಟೀವಿಗೇಕೆ ಬಂದೆ ಎನ್ನುವ ಪ್ರಶ್ನೆ ಕೂಡ ಇದೆ. ಆದರೆ ಅಲ್ಲಿ ಯಾವುದೋ ಕಥಾ ಪೋಷಕ ಪಾತ್ರ ನಿರ್ವಹಿಸುವುದಕ್ಕಿಂತ ಇಲ್ಲಿ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುವುದು ಮುಖ್ಯ ಎಂದೇ ಭಾವಿಸಿದ್ದೇನೆ.

◆ **ಬೆಳ್ಳಿತೆರೆಯ ಕನಸು ಹೊತ್ತು ಕಿರುತೆರೆಯಲ್ಲಿ ನೆಲೆ ನಿಂತಿದ್ದು ಏಕೆ?**

ನಾನು ಪ್ರಯತ್ನ ಮಾಡಿದ್ದೆ, ಅಲ್ಲಿ ನನಗೆ ಸಿಕ್ಕಿಲ್ಲ. ಕಾರಣ ಏನು ಎಂದು ನನಗೂ ಗೊತ್ತಿಲ್ಲ. ನನಗೆ ಸಮರ್ಪಕ ಮಾರ್ಗ ಸಿಕ್ಕಿರಲಿಕ್ಕಿಲ್ಲ. ಕೆಲವರು ಪಾತ್ರಕ್ಕಾಗಿ ಮಧ್ಯವರ್ತಿಗಳಿಂದ ವಂಚನೆಗೆ ತುತ್ತಾಗಿದ್ದಾರೆ. ನನಗೆ ಆ ರೀತಿಯ ಅನುಭವ ಆಗಿಲ್ಲ. ನಾನು ಯಾರನ್ನೂ ಸುಲಭಕ್ಕೆ ನಂಬುವುದಿಲ್ಲ. ಜನರನ್ನು ಅವರ ವರ್ತನೆಯನ್ನು ನೋಡಿದರೆ ಅರ್ಥ ಮಾಡಿಕೊಳ್ಳುತ್ತೇನೆ. ಯಾರ ಕೈಕಾಲು ಹಿಡಿದಿಲ್ಲ. ಸ್ವಸಾಮರ್ಥ್ಯದಿಂದ ನೆಲೆ ನಿಂತ ಆತ್ಮ ತೃಪ್ತಿ ಇದೆ. ಮೂರ್ನಾಲ್ಕು ಸಿನಿಮಾದಲ್ಲಿಯೂ ಮಾಡಿದ್ದೇನೆ. ಜಾಬ್ ಲೆಸ್ ಎಂದು ನಟಿಸಲು ಹೋಗುವುದಿಲ್ಲ, ಕಲಾವಿದರಿಗೆ ನಟನೆ ಸಂಪಾದನೆಯ ಮೂಲ. ಇವತ್ತು ನಾನು ಏನು ಮಾಡುತ್ತಿದ್ದೇನೆ ಅದು ಖುಷಿ ಕೊಡುತ್ತಿದೆ. ನನ್ನದೇ ಆದ ಕಲ್ಪನೆ ಇದೆ. ಅಳುಮುಂಜಿ ಪಾತ್ರ ಇಷ್ಟ ಆಗಲ್ಲ. ಸದಾ ಸವಾಲಿನ ಪಾತ್ರಗಳನ್ನು ಪ್ರತಿನಿಧಿಸಲು ಇಷ್ಟ.

◆ **ನಿಮ್ಮನ್ನು ಪ್ರಭಾವಿಸಿದ ಸಂದರ್ಭ ಹೇಳಬಹುದಾ?**

ಹುಟ್ಟಿ ಬೆಳೆದದ್ದು ಬೆಂಗಳೂರಿನಲ್ಲಿ. ಆಗ ಮಧ್ಯಮ ವರ್ಗದ ಕುಟುಂಬ ಆಗಿತ್ತು. ತಂದೆ ರವಿ ಪೊಲೀಸ್. ಅಮ್ಮ ಗೃಹಿಣಿ. ಅಣ್ಣ ಕಾರ್ಪೊರೇಟ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ನಾನು ಕಾಲೇಜಿಗೆ ಸೇರಿದ ನಂತರ ಕಾಸಿಗಾಗಿ ಪೋಷಕರಿಗೆ ಕೈಚಾಚಬಾರದು ಎಂದು ಅರೆಕಾಲಿಕ ಕೆಲಸ ಮಾಡುತ್ತಿದ್ದೆ. ಅಲ್ಪ ಅವಧಿಯಲ್ಲಿ ಹಲವು ಭಿನ್ನ ಕೆಲಸ ಮಾಡಿದ್ದೇನೆ. ಜೊತೆಗೆ ಮಾಡೆಲಿಂಗ್ ಮಾಡುತ್ತಿದ್ದೆ. ಇವೆಂಟ್ ಮಾಡ್ತಾ ಇದ್ದೆ. ನಾನೇ ಸಂಪಾದಿಸಿಕೊಂಡು ನನ್ನ ಖರ್ಚು ನಿಭಾಯಿಸುತ್ತಿದ್ದೆ. ಪ್ರಯತ್ನ ಮಾಡೋಣ ಎಂದು ನಟನೆಯತ್ತ ಬಂದೆ. ನನಗೆ ಪ್ರೇರಣೆ ಆಗಿದ್ದು ತಮಿಳು ಧಾರಾವಾಹಿಯ ಸೂರ್ಯ. ಅವರ ಜೊತೆ ನಟಿಸಬೇಕು ಎನ್ನುವ ಹಂಬಲ ಕೂಡ ನನ್ನಲ್ಲಿ ಮನೆ ಮಾಡಿತ್ತು. ನಟಿ ಆಗಬೇಕು ಎಂದು ಅಂದುಕೊಂಡಿಲ್ಲ. ಬಾಲ್ಯದಲ್ಲಿ ಕನಸು ಎನ್ನುವುದೂ ಇರಲಿಲ್ಲ. ತಮಿಳಿನಲ್ಲಿ ಸಿಕ್ಕಾಪಟ್ಟೆ ಅವಕಾಶ ಸಿಗುತ್ತಿವೆ, ನಾನು ಹೋಗುತ್ತಿಲ್ಲ. ತಮಿಳಿನಲ್ಲಿ ಎಷ್ಟೇ ನಟಿಸಿದರೂ ಗುರುತು ಹಿಡಿಯುವುದು ಕನ್ನಡದವರೇ ಅದಕ್ಕೆ ಇಲ್ಲೇ ಇದ್ದೀನಿ.

◆ **ಧಾರಾವಾಹಿ ಪಾತ್ರದ ಬಗ್ಗೆ ಹೇಳುವುದಾದರೆ...**

ಮಾನಸ ಸರೋವರ ಮುಗಿಯುತ್ತಿದ್ದ ಹಾಗೆ ನನಗೆ ನಿರ್ದೇಶಕರಿಂದ ಕರೆ ಬಂತು. ನಾನು ಆಯ್ಕೆಯಾಗಿದ್ದಾಗಿ ತಿಳಿಸಿದರು. ನನಗಾಗಿ ಕಾಯುತ್ತಿರುವುದಾಗಿಯೂ ಅವರು ಹೇಳಿದರು. ನನಗಾಗ ಸಿಕ್ಕಾಪಟ್ಟೆ ಖುಷಿ ಆಯ್ತು. ನನಗೋಸ್ಕರ ಕಾಯುತ್ತಿದ್ದಾರೆ ಎನ್ನುವುದು ಅಚ್ಚರಿಯನ್ನೂ ಉಂಟು ಮಾಡಿತ್ತು. ಪಾತ್ರ ತುಂಬ ತಮಾಷೆಯೂ ಅಲ್ಲ, ತುಂಬಾ ಗಂಭೀರವೂ ಅಲ್ಲ. ಸಮನಾಂತರ ಮನಃಸ್ಥಿತಿಯ ಗುಣವನ್ನು ಇದು ಒಳಗೊಂಡಿದೆ. ತಂದೆಯ ಗೌರವ ಕಾಪಾಡಬೇಕು. ಒಳ್ಳೆಯತನ ಉಳಿಸಿಕೊಳ್ಳಬೇಕು ಎನ್ನುವ ಹುಡುಗಿ. ನಗರದಲ್ಲಿಯೇ ಓದಿ ಬೆಳೆದಿದ್ದಾಳೆ. ಈಗ ಹಳ್ಳಿಗೆ ಬಂದಿದ್ದಾಳೆ. ಅಲ್ಲಿ ಒಬ್ಬ ಹುಡುಗನನ್ನು ಇಷ್ಟಪಟ್ಟಿದ್ದಾಳೆ. ಇಷ್ಟಪಟ್ಟಿರುವ ಹುಡುಗನ ಮನೆತನಕ್ಕೂ ನಮ್ಮ ಮನೆತನಕ್ಕೂ ತುಂಬ ದಿನಗಳ ಹಗೆತನ ಇದೆ. ಅದೇ ಈ ಧಾರಾವಾಹಿಯ ಕುತೂಹಲದ ಕೇಂದ್ರ. ನಮ್ಮಿಬ್ಬರ ನಡುವೆ ಪ್ರೀತಿ ಆಗುತ್ತದೆ, ಅದು ಹೇಗಾಗುತ್ತದೆ, ನಮ್ಮ ಪೋಷಕರು ಏನು ಮಾಡುತ್ತಾರೆ ಎನ್ನುವುದೇ ಇಲ್ಲಿ ಅನಾವರಣವಾಗಿದೆ.

■ **ರಾಘವೇಂದ್ರ ಕೆ.**